8

# ಕೃಪೆಯಿಂದ ರಕ್ಷಣೆ

"ಅಪರಾಧಗಳಿಂದ ಸತ್ತವಾರಾಗಿದ್ದ ನಮ್ಮನ್ನು (ದೇವರು) ಕ್ರಿಸ್ತನೊಂದಿಗೆ ಬದುಕಿಸಿದನು (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ)" ಎಂದು ಎಫೆಸ 2:5ರಲ್ಲಿ ಓದುತ್ತೇವೆ. ಪರಿಶುದ್ಧ ಬರಹಗಳಲ್ಲಿ ಕೃಪೆಗೆ ಬಹಳ ಮುಖ್ಯತ್ವ ಕೊಡಲ್ಪಟ್ಟಿದೆ. ಅದು ಪುನಃ ಪುನಃ ಹೇಳಲ್ಪಟ್ಟಿದೆ. "ಕೃಪೆ" ಎಂಬ ಪದವು ಪೌಲನ ಬರಹಗಳಲ್ಲಿ ಎಂಭತ್ತೆಂಟು ಸಲ ಕಂಡುಬರುತ್ತದೆ. ಹೊಸ ಒಡಂಬಡಿಕಯು ಕೃಪೆಯನ್ನು ಬಹಳ ಮುಖ್ಯವಾದದ್ದನ್ನಾಗಿ ಯೋಚಿಸುತ್ತದೆ. ನಾವು ಅದರಿಂದ ರಕ್ಷಿಸಲ್ಪಟ್ಟಿದ್ದೇವೆಂದು ಹೇಳಲ್ಪಟ್ಟಿದೆ. ನಮ್ಮ ವಾಕ್ಯ ಭಾಗವು ಇದನ್ನು ಸಾರಿ ಹೇಳುತ್ತದೆ. ರೋಮಾಪುರ 3:24ರಲ್ಲಿ ನಾವು "ಆತನ ಕೃಪೆಯಿಂದ ಒಂದು ವರದಂತೆ ನೀತಿ ನಿರ್ಣಯ ಹೊಂದಿದ್ದೇವೆ" ಎಂದು ಪೌಲನು ಹೇಳಿದ್ದಾನೆ.

## ಕೃಪೆಯ ಅರ್ಥವು ಏನಾಗಿದೆ ?

"ಕೃಪೆ" ಅಂದರೆ ಕರುಣೆಯಿಂದ ಮಾಡುವ "ಉಪಕಾರ" ಎಂದು ಅರ್ಥ. ದೇವರ ಅನುಗ್ರಹದಿಂದ ನಾವು ರಕ್ಷಿಸಲ್ಪಟ್ಟಿದ್ದೇವೆ. ನಮ್ಮ ಪರವಾಗಿ ನಾವು ಅದಕ್ಕೆ ಅರ್ಹರಲ್ಲ. ಮನುಷ್ಯನು ತನ್ನ ಸ್ವಂತ ದುಷ್ಟತನದಿಂದ ತನ್ನನ್ನು ದೂರಮಾಡಿಕೊಂಡಿದ್ದಾನೆ (ಯೆಶಾಯ 59:1, 2; ರೋಮಾಪುರ 3:23). ತನ್ನನ್ನು ದೇವರೊಂದಿಗೆ ಸಂಧಾನ ಪಡಿಸಿಕೊಳ್ಳುಲು ಅವನು ಮಾಡುವಂಥದ್ದು ಯಾವುದೂ ಇರುವದಿಲ್ಲ. ಕ್ಷಮಾಪಣೆಗೆ ಯೋಗ್ಯವಾದ ಯಾವುದನ್ನೂ ಅವನು ಮಾಡಲಾರನು. ಹೀಗಿದ್ದರೂ ಮನುಷ್ಯನು ಕ್ಷಮಿಸಲ್ಪಡುವಂತೆ ಒಂದು ಮಾರ್ಗ ಒದಗಿಸಲು ದೇವರು ಮನುಷ್ಯನನ್ನು ಪ್ರೀತಿಸಿದನು. ಆ ಮಾರ್ಗವನ್ನು ಒದಗಿಸುವದರಲ್ಲಿ ದೇವರು ಮಾಡಿದ್ದೆಲ್ಲವೂ ಸಂಯುಕ್ತವಾಗಿ "ಕೃಪೆ" ಎಂಬ ಪದದಲ್ಲಿ ಒಳಗೊಂಡಿರುತ್ತದೆ. ನಿಶ್ಚಯವಾಗಿ ಯಾವುದು ಒಳಗೊಂಡಿದೆ?

(1) ದೇವರ ಪ್ರೀತಿಯ ವರವಾದ ಕ್ರಿಸ್ತನು ಒಳಗೊಂಡಿದ್ದಾನೆ. ನೀತಿ ನಿರ್ಣಯದ ಮಹಾಯೋಜನೆಯು ದೇವರ ಮನಸ್ಸಿನಲ್ಲಿ ಪ್ರಾರಂಭವಾಯಿತು. ಆಮೇಲೆ ಅದು ಆತನ ಕುಮಾರನಲ್ಲಿ ರೂಪಗೊಂಡಿತು. ಆತನು ಕ್ರೈಸ್ತ ಪದ್ಧತಿಯ ಕೇಂದ್ರವೂ ನಮ್ಮ ವಿಶ್ವಾಸದ ಗುರಿಯೂ ನಮ್ಮ ನಿರೀಕ್ಷೆಗಳ ಲಂಗರವೂ ಆಗಿದ್ದಾನೆ. ಪಾಪದ ಪರಿಹಾರಕ್ಕಾಗಿ ಯೇಸುವನ್ನು ಕೊಡುವಷ್ಟು ದೇವರು ಲೋಕವನ್ನು ಪ್ರೀತಿಸಿದನು (ಯೋಹಾನ 3:16; 1 ಯೋಹಾನ 2:2). ಲೋಕಕ್ಕೆ ಯೇಸುವನ್ನು ಕೊಡಲಿಕ್ಕೆ ದೇವರ ಕೃಪೆಯು ಆತನನ್ನು ಪ್ರೇರೇಪಿಸಿತು.

(2) ಕ್ರಿಸ್ತನ ರಕ್ತವು ಒಳಗೊಂಡಿರುತ್ತದೆ. ವಿಮೋಚನೆಯು ಕ್ರಿಸ್ತನು ಸುರಿಸಿದ ರಕ್ತದ ಮುಖಾಂತರವಾಗಿದೆಯೆಂದು ಇಬ್ರಿಯ 9:22, 1 ಯೋಹಾನ 1:7, ಹಾಗೂ ಎಫೆಸ 1:7 ಹೇಳ್ಳುತ್ತದೆ. ಇದು ಸಂಪೂರ್ಣವಾಗಿ ದೈವಿಕ ಕಾರ್ಯವಾಗಿದೆ. ಮನುಷ್ಯನು ಈ

ಯಜ್ಞಕ್ಕೆ ಅರ್ಹನಾಗಿರಲಿಲ್ಲ: ಅದು ಕೃಪೆಯಾಗಿದೆ. ಆತನು ನಮ್ಮ ಸ್ಥಾನವನ್ನು ತೆಗೆದುಕೊಂಡನು ಮತ್ತು ನಮಗಾಗಿ ಮರಣ ಹೊಂದಿದನು.

(3) ಮಾರ್ಪಡುವಿಕೆಯಲ್ಲಿಯ ಪರಿಶುದ್ಧಾತ್ಮನು ಹಾಗೂ ಆತನ ಕಾರ್ಯವು "ಕೃಪೆ" ಎಂಬ ಪದದಲ್ಲಿ ಅಡಗಿಸಲ್ಪಟ್ಟಿದೆ. ಪರಿಶುದ್ಧಾತ್ಮನಿಂದ ನಾವು ನೀತಿನಿರ್ಣಯ ಹೊಂದಿದ್ದೇವೆ (1 ಕೊರಿಂಥ 6:11). ಪರಿಶುದ್ಧಾತ್ಮನು ಅಪೊಸ್ತಲರ ಮತ್ತು ಇತರ ಪ್ರೇರಿತ ಜನರ ಮುಖಾಂತರವಾಗಿ ಜಗತ್ತಿಗೆ ಸುವಾರ್ತೆಯನ್ನು ವಿವರಿಸಿದರು. ಸುವಾರ್ತೆಯ ಮುಖಾಂತರ ಪರಿಶುದ್ಧಾತ್ಮನು ಪಾಪಿಗಳನ್ನು ಮಾರ್ಪಡಿಸುತ್ತದೆ (ಎಫೆಸ 6:17).

(4) ಸುವಾರ್ತೆಯು ರಕ್ಷಿಸುತ್ತದೆ (ರೋಮಾಪುರ 1:16). ಪಾಪಿಗಳನ್ನು ರಕ್ಷಿಸುವದರಲ್ಲಿ ದೇವರ ಭಾಗದಲ್ಲಿ ಸುವಾರ್ತೆಯ ಸಂದೇಶವು ನಿಶ್ಚಿತವಾಗಿಯೂ ಒಳಗೊಂಡಿರುತ್ತದೆ. ಅದು ಖಂಡಿತವಾಗಿಯೂ ಮನುಷ್ಯನ ಕಡೆಗೆ ದೇವರ ಉಪಕಾರದಲ್ಲಿ ಇಲ್ಲವೇ ಕೃಪೆಯಲ್ಲಿ ಒಳಗೊಂಡಿರುತ್ತದೆ.

ಈ ವಿಷಯಗಳಲ್ಲಿ ಪ್ರತಿಯೊಂದೂ ಕೃಪೆಯ ವಿಧಾನದಲ್ಲಿ ಒಳಗೊಂಡಿರುತ್ತದೆ. ದೇವರು, ಕ್ರಿಸ್ತನು, ಪರಿಶುದ್ಧಾತ್ಮನು, ಸುವಾರ್ತೆ ಹಾಗೂ ಪಾಪಿಗಳನ್ನು ರಕ್ಷಿಸುವದರಲ್ಲಿ ಈ ಪ್ರತಿಯೊಂದರಿಂದ ಮಾಡಿದ ಕೆಲಸ ಎಲ್ಲವೂ "ಕೃಪೆಯ" ತತ್ವದಲ್ಲಿ ಒಂದುಗೂಡಿಸಲ್ಪಟ್ಟಿದೆ.

## ರಕ್ಷಣೆಯು ಕೃಪೆಯಿಂದ ಮಾತ್ರವೇ ಇರುವುದೋ?

"ರಕ್ಷಣೆಯು ಕೃಪೆಯಿಂದಲೇ ಮಾತ್ರವೇ?" ಎಂದು ನಾವು ಕೇಳುವಾಗ "ರಕ್ಷಣೆಯು ಪರಲೋಕದ ಪ್ರಯತ್ನಗಳ ಮೇಲೆ ಮಾತ್ರವೇ ಆಧಾರವಾಗಿದೆಯೋ?" ಎಂಬುದು ನಮ್ಮ ಅರ್ಥ. ಕೆಲವರು ಹೀಗೆಂದು ಹೇಳಿದ್ದಾರೆ. ಅದು ಹಾಗಿದ್ದರೆ, ಎರಡರಲ್ಲಿ ಒಂದು ತೀರ್ಮಾನಕ್ಕೆ ಬರತಕ್ಕದ್ದು: ದೇವರು ಎಲ್ಲರನ್ನೂ ರಕ್ಷಿಸುತ್ತಾನೆ, ಇಲ್ಲವೇ ಆತನು ಕೆಲವರನ್ನು ಮಾತ್ರವೇ ಆಯ್ದುಕೊಂಡು ಅವರನ್ನು ಶರತ್ತು ಇಲ್ಲದೇ ರಕ್ಷಿಸುವನು. "ಕೃಪೆಯಿಂದ ಮಾತ್ರವೇ" ರಕ್ಷಣೆ ಎಂಬ ತತ್ವವು ವಿಶ್ವದ ರಕ್ಷಣೆಯನ್ನು ಇಲ್ಲವೇ ಪೂರ್ವ ನಿರ್ಧರಿಸುವ ಹಾಗೂ ಶರತ್ತು ಇಲ್ಲದೆ ಆಯ್ಕೆಯನ್ನು ಸ್ವೀಕರಿಸಲು ಒತ್ತಾಯಿಸುತ್ತದೆ. ಧಾರ್ಮಿಕ ಜನರಿಂದ ಈ ಪ್ರತಿಯೊಂದು ತತ್ವವು ಬೋಧಿಸಲ್ಪಟ್ಟಿದ್ದರೂ ಎರಡೂ ತಿರಸ್ಕರಿಸದಷ್ಟು ಸುಳ್ಳಾಗಿವೆ. ಕೆಲವರು ತಪ್ಪಿಹೋಗುವರೆಂದು ಬೈಬಲು ಸ್ಪಷ್ಟವಾಗಿ ಬೋಧಿಸುತ್ತದೆ (ಮತ್ತಾಯ 7:13). ಆತನು ಶರತ್ತುಗಳಿಲ್ಲದೆ ಕೆಲವರನ್ನು ಆಯ್ಕೆ ಮಾಡಿಕೊಳ್ಳುತ್ತಾನೆ ಮತ್ತು ಇತರ ಎಲ್ಲರನ್ನೂ ಏಕಪಕ್ಷವಾಗಿ ದಂಡಿಸುತ್ತಾನೆ ಎಂದು ಹೇಳುವುದು ದೇವರು ಪಕ್ಷಿಪಾತಿಯಾಗಿದ್ದಾನೆಂದು ದೂರುವುದಾಗಿದೆ. ಆತನು ಹಾಗೆ ಮಾಡುವದಿಲ್ಲವೆಂದು ಪರಿಶುದ್ಧ ಬರಹಗಳು ಹೇಳುತ್ತವೆ (ರೋಮಾಪುರ 2:11). "ಕೃಪೆಯಿಂದ ಮಾತ್ರವೇ" ಎಂಬ ತತ್ವವು ಸತ್ಯವಾಗಿರಲು ಸಾಧ್ಯವಿಲ್ಲ.

## ಯಾರು ಕೃಪೆಯಿಂದ ರಕ್ಷಿಸಲ್ಪಟ್ಟಿದ್ದಾರೆ?

ದೇವರ ಕೃಪೆಯನ್ನು ಇಲ್ಲವೇ ಉಪಕಾರವನ್ನು ಸ್ವೀಕರಿಸುವವರು ಕೃಪೆಯಿಂದ ರಕ್ಷಿಸಲ್ಪಡುವರು. ಯಾವುದೇ ವರವು ಸ್ವೀಕರಿಸಬೇಕು. ನಾವು ಏನನ್ನಾದರೂ ಮಾಡಬೇಕಾಗಿದ್ದರೆ ರಕ್ಷಣೆಯು ಕೃಪೆಯಿಂದ ಹೇಗೆ ಆಗುತ್ತದೆಂಬುದನ್ನು ಕೆಲವರು ಅರ್ಥಮಾಡಿಕೊಳ್ಳಲಾರರು. ಆದರೆ ನಾವು ನೋಡುವಂತೆ ಇದು ಸತ್ಯವಾಗಿದೆ.

ಒಂದು ಸರಳವಾದ ಉದಾಹರಣೆಯು ಸೃಷ್ಟಿಯಿಂದ ಬರುತ್ತದೆ. ದೇವರ

ಕೃಪೆಯಿಂದ ನಮಗೆ ರೊಟ್ಟಿಯಿರುವುದು. ನಾವು ದಿನದಿನದ ರೊಟ್ಟಿಗಾಗಿ ಬೇಡಿ ಕೊಳ್ಳುತ್ತೇವ. ದೇವರು ಅದನ್ನು ಕೊಡುತ್ತಾನೆ ಎಂದು ನಂಬುತ್ತೇವೆ. ಆದಾಗ್ಯೂ ನಾವು ನಮ್ಮ ಭಾಗವನ್ನು ಮಾಡಬೇಕು. ಧಾನ್ಯದ ಸುಗ್ಗಿ ಮಾಡಲಿಕ್ಕೆ ಮತ್ತು ರೊಟ್ಟಿಯನ್ನು ಬೇಯಿಸಲಿಕ್ಕೆ ನಾವು ಕೆಲಸ ಮಾಡಬೇಕಾಗಿದ್ದರೂ ಅದು ದೇವರಿಂದ ಒಂದು ವರ ವಾಗಿದೆ. ನಿಸರ್ಗದಲ್ಲಿ ದೇವರ ನಿಯಮಗಳಿಗೆ ಒಪ್ಪಿಕೊಳ್ಳುವದರಿಂದ ಈ ವರವನ್ನು ನಾವು ಹೊಂದಿಕೊಳ್ಳುತ್ತೇವೆ.

ದೇವರ ದೃಷ್ಟಿಯಲ್ಲಿ ನೋಹನು "ದಯೆ" ಹೊಂದಿದನೆಂದು ಆದಿಕಾಂಡ 6:8 ನಮಗ ತಿಳಿಸುತ್ತದೆ. ಅವನು ತಪ್ಪಿಸಿಕೊಳ್ಳುವದಕ್ಕಾಗಿ ದೇವರು ಒಂದು ಯೋಜನೆಯನ್ನು ಒದಗಿಸಿಕೊಟ್ಟು ಅದನ್ನು ಅವನಿಗೆ ಪ್ರಕಟಿಸಿದನು. ಅದೆಲ್ಲವೂ ದಯೆಯ ಇಲ್ಲವೇ ಕೃಪೆಯ ವಿಷಯವಾಗಿತ್ತು. ಹೀಗಿದ್ದರೂ ನೋಹನ ಭಾಗವು ಅವಶ್ಯವಾಗಿತ್ತು. ಅವನು ನಾವೆಯನ್ನು ಕಟ್ಟಬೇಕಾಗಿತ್ತು. ಇಬ್ರೀಯ ಗ್ರಂಥ ಕರ್ತನು ಘೋಷಿಸಿದಂತೆ ಅವನು ನಂಬಿಕೆಯಿಂದ ಹಾಗೂ ವಿಧೇಯತೆಯಿಂದ ರಕ್ಷಿಸಲ್ಪಟ್ಟನು (11:7).

ಯೆಹೋಶುವ 6:2ರ ಪ್ರಕಾರ, ಯೆರಿಕೋ ಪಟ್ಟಣವು ಕರ್ತನಿಂದ ಇಸ್ರಯೇಲ್ಯರಿಗೆ ಕೊಡಲ್ಪಟ್ಟಿತ್ತು. ಅದು ಕೃಪೆಯಿಂದ ಕೊಡಲ್ಪಟ್ಟ ಒಂದು ವರವಾಗಿತ್ತು. ಆದಾಗ್ಯೂ ಪಟ್ಟಣವನ್ನು ಹೇಗೆ ವಶಪಡಿಸಿಕೊಳ್ಳಬೇಕೆಂದು ಹೇಳಲ್ಪಟ್ಟಿತು. ದೇವರು ಅವರಿಗೆ ಕೊಟ್ಟ ಪಟ್ಟಣವನ್ನು ತೆಗೆದುಕೊಳ್ಳಲು ಅವರ ಒಂದು ವಾರದ ಚಟುವಟಿಕೆಯ ಅಗತ್ಯತೆಯಿತ್ತು. ವಿಧೇಯತೆಯ ಅಗತ್ಯತೆಯನ್ನು ಕೃಪೆಯು ತೆಗೆದು ಹಾಕುವದಿಲ್ಲ.

ನಮ್ಮ ಪಠ್ಯದ ಕಡೆಗೆ ಪುನಃ ನೋಡೋಣ. ಎಫೆಸದವರು ಕೃಪೆಯಿಂದ ರಕ್ಷಿಸಲ್ಪಟ್ಟರೆಂದು ಪೌಲನು ಹೇಳಿದನು. ಅಪೊಸ್ತಲರ ಕೃತ್ಯ 19ರಲ್ಲಿ ಅವರ ಮಾರ್ಪಡುವಿಕೆಯ ವಿವರಗಳನ್ನು ನೋಡಬಹುದು. ಅವರ ಮಾರ್ಪಡುವಿಕೆಯು ಪೌಲನಿಂದ ಸುವಾರ್ತೆಯು ಸಾರಲ್ಪಡುವದರಲ್ಲಿ ಮಾನವ ಸಾಧನವು ಒಳಗೊಂಡಿತ್ತೆಂಬುದನ್ನು ನೋಡಬಹುದು. ಅದಕ್ಕೆ ವಿಶ್ವಾಸದ ಅಗತ್ಯತೆಯಿತ್ತು ಮತ್ತು ಬಾಪ್ತಿಸ್ಮದ ಅಗತ್ಯತೆಯಿತ್ತು. ಆ ಘಟನೆಯನ್ನು ಹಿಂದಿರುಗಿ ನೋಡಿ, ಅವರು ಕೃಪೆಯಿಂದ ರಕ್ಷಿಸಲ್ಪಟ್ಟರು ಎಂದು ಪೌಲನು ಹೇಳಿದನು. ಅವರ ವಿಷಯವನ್ನು ಅಧ್ಯಯನ ಮಾಡಿ, ಕೃಪೆಯಿಂದ ರಕ್ಷಿಸಲ್ಪಡುವುದು ಹೇಗೆ ಎಂಬುದನ್ನು ಕಲಿತುಕೊಳ್ಳಬಹುದು.

ಈ ಘಟನೆಗಳಲ್ಲಿ ಪ್ರತಿಯೊಂದರಲ್ಲಿ ಕೃಪೆಯಿಂದ ಆಶೀರ್ವಾದವು ಹೇಗೆ ಹೊಂದಿಕೊಳ್ಳಲ್ಪಟ್ಟಿತು ಎಂಬುದನ್ನು ನಾವು ನೋಡುವಾಗ ಹಾಗೂ ವ್ಯಕ್ತಿಯ ಭಾಗವು ಇನ್ನೂ ಅಗತ್ಯವಿದ್ದಾಗ, ನಮ್ಮ ಪರವಾಗಿ ವಿಧೇಯತೆಯ ನಿಶ್ಚಿತ ಕಾರ್ಯಗಳನ್ನು ತಿರಸ್ಕರಿಸದೇ ಕೃಪೆಯಿಂದ ನಮ್ಮ ರಕ್ಷಣೆಯು ಬರುವುದು ಎಂಬುದನ್ನು ನಾವು ಯಾಕೆ ಸ್ವೀಕರಿಸಬಾರದು? ರಕ್ಷಿಸಲ್ಪಡಲು ದೇವರು ನಮಗೆ ಆಜ್ಞಾಪಿಸಿದ್ದೆಲ್ಲವನ್ನು ನಾವು ಮಾಡಿದ ನಂತರವೂ ಅದು ಇನ್ನೂ ಕೃಪೆಯ ವಿಷಯವಾಗಿದೆ. ವಿಧೇಯತೆಯ ಆ ಸರಳವಾದ ಕೃತ್ಯಗಳಿಂದ ನಾವು ರಕ್ಷಣೆ ಪಡೆಯಬಹುದೆಂದು ನಾವು ನಿಶ್ಚಯವಾಗಿ ವಾದಿಸುವದಿಲ್ಲ.

ರಕ್ಷಣೆಯು ಕೃಪೆಯಿಂದಾಗುತ್ತದೆ; ನಾವು ಪ್ರಶಾಂಸಾರ್ಹವಾದ ಕೆಲಸಗಳನ್ನು ಮಾಡಿ ಅದರಿಂದ ರಕ್ಷಣೆ ಹೊಂದಿಕೊಳ್ಳುವದಿಲ್ಲ. ದೇವರು ಆಜ್ಞಾಪಿಸಿದ್ದೆಲ್ಲವನ್ನೂ ನಾವು ಮಾಡಿದ ನಂತರವೂ ಅಯೋಗ್ಯ ದಾಸರಾಗಿದ್ದೇವೆ (ಲೂಕ 17:10). ದೇವರ ದಯೆಯು ವಿಧೇಯ ವಿಶ್ವಾಸದಿಂದ ಸಾಧಿಸಲ್ಪಡುತ್ತದೆಂದು ನಾವು ಅರ್ಥ ಮಾಡಿಕೊಂಡಾಗ್ಯೂ ನಾವು ನಂಬಿ ವಿಧೇಯರಾಗುವಂತೆ ಇನ್ನೂ, "Amazing grace! How sweet the sound!" ಎಂದು ಹಾಡಬಹುದು.



© 2009 Truth for Today